ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಂ. ಶ್ಯಾಮ್ಪ್ರಸಾದ್

ಶ್ರೀಮತಿ ಭಾಗ್ಯ ಹಾಗೂ ಇತರರು -ವಿರುದ್ಧ-ಶ್ರೀಮತಿ ಜಯಲಕ್ಷ್ಮಿ ಹಾಗೂ ಇತರರು

ನಿಯತ ಮೊದಲ ಅಪೀಲುಸಂಖ್ಯೆ: 831/2013 (ಎಸ್ಪಿ), ದಿನಾಂಕ 13 ನೇ ಫೆಬ್ರುವರಿ, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ರವಿ ಮಳಿಮಠ:

ಅಪೀಲನ್ನು ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದಂಥ ಜ್ಞಾಪನಪತ್ರವನ್ನುದಿನಾಂಕ: 31.01.2019 ರಂದು, ಮೂರು ಜನ ಅಪೀಲುದಾರರು ಸಹಿ ಮಾಡಿ ಸಲ್ಲಿಸಿರುತ್ತಾರೆ.ಹೊಸ ವಕೀಲರು ಸಲ್ಲಿಸಿದ ಜ್ಞಾಪನ ಪತ್ರಕ್ಕೆ ಈ ಮೊದಲಿನ ವಕೀಲರಿಂದ ' ನಿರಾಕ್ಷೇಪಣಾ ಪ್ರಮಾಣಪತ್ರ'ವನ್ನು ಪಡೆದಿರುವುದಿಲ್ಲ.ಪ್ರಶ್ನಿಸಲಾಗಿ, ಅವರು ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ನಿಯಮಿತ -ವಿರುದ್ಧ-ಎಮ್ ರಾಜಶೇಖರ್ ಹಾಗೂ ಇತರರು ಎಂ.ಎಫ್.ಎಸಂಖ್ಯೆ: 2013 ರ 6526,ದಿನಾಂಕ: 2.12.2016 ಈ ನ್ಯಾಯಾಲಯದ ತೀರ್ಪನ್ನು ಆಧರಿಸಿ, ವಕಾಲತ್ತನ್ನು ಹೂಡಲು ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆದುಕೊಳ್ಳುವ ಅಗತ್ಯವಿಲ್ಲವೆಂದು ನಿವೇದಿಸಿದ್ದಾರೆ.ನಾವು ಅವರ ನಿವೇದನೆಯನ್ನು ಅಂಗೀಕರಿಸಲು ಆಗುವುದಿಲ್ಲ.ಮಾನ್ಯ ನ್ಯಾಯವಾದಿಗಳು, ತೀರ್ಪಿನ ಕಂಡಿಕೆ 8 ರಲ್ಲಿ ಮಂಡಿಸಿರುವ ಆಧಾರವು ತಪ್ಪು ಗ್ರಹಿಕೆಯಿಂದ ಕೂಡಿದೆ.ವಿಭಾಗೀಯ ಪೀಠವು, ಇದರಲ್ಲಿ, ವಕೀಲರು ಕಾನೂನಿಗೆ ಗೊತ್ತಿರುವ ರೀತಿಯಲ್ಲಿ ಮಾತ್ರ ತಮ್ಮ ಕಕ್ಷಿದಾರರ ಮೂಲಕ ಕಾರ್ಯ ನಿರ್ವಹಿಸುವಂಥ ಸಂದರ್ಭದಲ್ಲಿ ಮಾತ್ರ ನಿರಾಕ್ಷೇಪಣಾ ಪ್ರಮಾಣಪತ್ರ ' ಅಗತ್ಯವಿರುವುದಿಲ್ಲ, ಹೊಸ ವಕೀಲರು ಆಗ ' ನಿರಾಕ್ಷೇಪಣಾ ಪ್ರಮಾಣಪತ್ರ ' ವಿಲ್ಲದೆ ವಕಾಲತ್ತು ಹೂಡಬಹುದು ಎಂದು ತೀರ್ಮಾನಿಸಿದೆ.ಮುಂಚಿನ ವಕೀಲರು ಸಿಂಧುವಾದ ವಕಾಲತ್ತನ್ನು ಇನ್ನೂ ನಡೆಸುತ್ತಿರುವಾಗ, ಹೊಸ ವಕೀಲರು ಪ್ರಕರಣವನ್ನು ನಡೆಸುವ ಪ್ರಶ್ನೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ.ಆದುದರಿಂದ ವಕೀಲರು ಈ ಹಿಂದೆ ಹೇಳಿದ ತೀರ್ಪನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ.

2. ಈ ಸನ್ನಿವೇಶಗಳಲ್ಲಿ ನಾವು, ವಕಾಲತ್ತನ್ನು ಇನ್ನೂ ನಡೆಸುತ್ತಿರುವ ಈಗಿರುವ ವಕೀಲರಿಂದ ' ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯುವವರೆಗೆ ಹಾಗೂ ಪಡೆದ ಹೊರತು, ಯಾರೇ ಹೊಸ ವಕೀಲರನ್ನು ದಾಖಲೆಯಲ್ಲಿ ತೋರಿಸುವಂತಿಲ್ಲ.

3. ಮೊದಲಿನ ವಕೀಲರು, ಹೊಸ ವಕೀಲರಿಗೆ ತಮ್ಮ ನಿರಾಕ್ಷೇಪಣಾ ಪ್ರಮಾಣಪತ್ರ'ವನ್ನು ನೀಡಿರುವುದು ಎಂದು ಪ್ರಸ್ತುತ ನಿವೇದಿಸಲಾಗಿದೆ.ಆದುದರಿಂದ, ಅಪೀಲುದಾರರ ಹೊಸ ವಕಾಲತ್ತನ್ನು ಒಪ್ಪಿಕೊಳ್ಳಲಾಗಿದೆ.ಪರಿಣಾಮವಾಗಿ, ಅಪೀಲನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ ಜ್ಞಾಪನ ಪತ್ರವನ್ನು ಪುರಸ್ಕರಿಸಲಾಗಿದೆ.ಹಿಂಪಡೆದ ಕಾರಣದಿಂದ ಅಪೀಲನ್ನು ವಜಾಗೊಳಿಸಲಾಗಿದೆ.